ಅಂತ್ಯ ಎನ್ನುವುದು ಮುಕ್ತಾಯವನ್ನಷ್ಟೇ ಸೂಚಿಸುವುದಿಲ್ಲ; ಹೊಸತರ ಆರಂಭದ ಸಂಕೇತವನ್ನೂ ಸೂಚಿಸುತ್ತದೆ. ಆ ಕಾರಣದಿಂದಲೇ ಹೊಸತಿನ ಜೊತೆಗೆ ಸಂಭ್ರಮವೂ ನಿರೀಕ್ಷೆಯೂ ಸೇರಿಕೊಂಡಿರುತ್ತದೆ. ಭೂತಕಾಲ ಎಷ್ಟೇ ಕಠಿಣವಾಗಿದ್ದರೂ ನೀವು ಹೊಸತನ್ನು ಮತ್ತೆ ಮತ್ತೆ ಆರಂಭಿಸಿ ಎನ್ನುವ ಗೌತಮಬುದ್ಧನ ಮಾತಿನಲ್ಲಿರುವುದು ಕೂಡ ಹೊಸತೆನ್ನುವುದು ಸಂಭ್ರಮದ ಒರತೆಯೆನ್ನುವ ಧ್ವನಿಯೇ. ಈ ಆಶಾಭಾವದಿಂದಲೇ, ಅಂಗಳದಲ್ಲಿ ಮಂದಹಾಸ ಬೀರುತ್ತಿರುವ 2021ನೇ ವರ್ಷವನ್ನು ನಾವು ಸ್ವಾಗತಿಸಬೇಕಾಗಿದೆ. ಕೊರೊನಾ ಕಾರಣದಿಂದಾಗಿ ಇತಿಹಾಸಕ್ಕೆ ಸಲ್ಲುತ್ತಿರುವ 2020ನೇ ವರ್ಷ ಮನುಕುಲದ ಮೇಲೆ ಬೀರಿದ ದುಷ್ಪರಿಣಾಮ ಅಷ್ಟಿಷ್ಟಲ್ಲ. ಅಪಾರ ಪ್ರಮಾಣದ ಸಾವುನೋವಿನ ಜೊತೆಗೆ ನಾವು ಕಟ್ಟಿಕೊಂಡಿwದ್ದ ನಂಬಿಕೆಗಳೂ ಬದುಕಿನ ಆಕೃತಿಗಳೂ ಬುಡಮೇಲಾದ ವರ್ಷವಿದು. ಈ ನಿರಾಶೆ ಮತ್ತು ಸಂಕಷ್ಟದ ನಡುವೆಯೂ ಬದುಕಿಗೆ ಬೇಕಾದ ಹೊಸ ಭರವಸೆಗಳನ್ನು, ಜೀವನಪ್ರೀತಿಯನ್ನು ನವೀಕರಿಸಿಕೊಳ್ಳಲು ಒಂದು ಅವಕಾಶವೆನ್ನುವಂತೆ 2021 ನಮ್ಮ ಮುಂದಿದೆ. ಈ ಸಂಕ್ರಮಣ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳ ಸೃಜನಶೀಲರು ಕಳೆದ ವರ್ಷದ ಮೆಲುಕಿನೊಂದಿಗೆ ಹೊಸ ವರ್ಷದ ಕುರಿತ ತಮ್ಮ ನಿರೀಕ್ಷೆಗಳನ್ನು ‘ಸುಧಾ’ ಜೊತೆ ಹಂಚಿಕೊಂಡಿದ್ದಾರೆ. ಈ ನೋಟ–ನಿರೀಕ್ಷೆಗಳು ನಮ್ಮ ಓದುಗರಿಗೆ ಪ್ರೇರಣೆಯಾಗಿ ಒದಗಲಿ ಎನ್ನುವ ಆಶಯ ‘ಸುಧಾ’ ಬಳಗದ್ದು. ಎಲ್ಲ ಓದುಗರಿಗೆ ಹೊಸ ವರ್ಷದ ಶುಭಾಶಯಗಳು.

–ಸಂಪಾದಕ

